MR. SPEAKER.—Announcement :

(1) The following Members have been declared elected to the senate of the Gulbarga University :

Sriyuths :

1 Dr. Pushpavathi

2. Bhimumeni Kondaiah

3. Basavaraj Patil Attur

4. M. L. Ustad

5. M. Veeraiah Swamy

I Received the following message from the Chairman Legislative Council.

(2) A ccording to I ule 114 of the Rules of Procedure and Conduct of Business in the Karnataka Legislative Council I send him with the following Bills which have been a greed to by the Legislative Council on 15-10-1988 whithout amendments.

(a) THE KARNATAKA STATE UNiVERSITIES (AMENDMENT) BILL, 1988.

(b) THE KARNATAKA FOREST (AMENDMENT) BILL 1987.

(c) THE KARNATAKA APPROPRIATION BILL (No.3) 1988.

(d) THE KARNATAKA APPROPRIATION BILL (No.4) 1988.

ಶಾಸನ ರಚನಾ ಕಾರ್ಯಕಲಾಪಗಳು

ರ್ಗಲಬರ್ಗ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯದ (ಎರಡನೇ ತಿದ್ದುಪಡಿ) ವಿಧೇಯಕ.

ಪರಾಮರ್ಶನಾ ಪ್ರಸ್ತಾವ

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು)— ಮಾನ್ಯ ಅಧ್ಯಕ್ಷರೇ, ರ್ಗಲಬರ್ಗ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯದ ೨ನೇ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಪುರಸ್ಕರಿಸಲಾಯಿತು

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕುವೆಂಪು ಯೂನಿವರ್ಸಿಟಿ ೨೯-೬-೧೯೮೫ರಲ್ಲಿ ಪ್ರಾರಂಭವಾಯಿತು. ಒಂದು ವರ್ಷದೊಳಗೆ ಸಿಂಡಿಕೇಟ್, ಸೆನೆಟ್ ಮತ್ತು ಕೌನ್ಸಿಲ್‌ಗೆ ಚುನಾವಣೆ ಆಗಬೇಕೆಂದು ಹೇಳಿದಾಗ, ಉಪ ಕುಲಪತಿಗಳನ್ನು ನೇಮಕ ಮಾಡುವುದು ಸ್ವಲ್ಪ ತಡವಾಯಿತು. ಅವರು ಚಾರ್ಜ್ ತೆಗೆದುಕೊಂಡಿರುವುದು ೧-೧-೧೯೮೬ರಲ್ಲಿ. ಕೇವಲ ಎರಡು ತಿಂಗಳು ಇತ್ತು. ಬೇರೆ ವಿಶ್ವವಿದ್ಯಾನಿಲಯಗಳಿಗೆ ಎರಡು ವರ್ಷಗಳ ಅವಧಿಕೊಟ್ಟಿತ್ತು. ಅದೇ ರೀತಿ ಈ ಒಂದು ವರ್ಷವನ್ನು ಎರಡು ವರ್ಷಕ್ಕೆ ಹಾಕಿದರೆ, ಮುಂದೆ ರ್ಗಲಬರ್ಗನೇ ಜುಲೈ ಒಳಗಾಗಿ ಈ ನೇಮಕಾತಿಗಳನ್ನು ಮಾಡುವುದಕ್ಕಾಗುತ್ತದೆ ಮತ್ತು ಚುನಾವಣೆಗಳನ್ನು ಮಾಡುವುದಕ್ಕಾಗುತ್ತದೆ.

ಆದ್ದರಿಂದ ಒಂದು ವರ್ಷದಿಂದ ಎರಡು ವರ್ಷಕ್ಕೆ ವಿಸ್ತಾರ ಮಾಡುವುದಷ್ಟೇ ಈ ಒಂದು ಸಣ್ಣ ತಿದ್ದುಪಡಿಯ ಉದ್ದೇಶ.

† ಶ್ರೀ ಕೆ. ಹೆಚ್. ಶ್ರೀನಿವಾಸ್,—ಸನ್ಮಾನ್ಯ ಅಧ್ಯಕ್ಷರೆ, ಈ ವಿಧೇಯಕಕ್ಕೆ ನನ್ನದೂ ಏನೂ ವಿರೋಧ ಇಲ್ಲ, ಆದರೆ ಸರ್ಕಾರ ಒಂದೂ ತೊಂದರೆಯನ್ನು ಗಮನಿಸಿ ಸಮಯವನ್ನು ಜಾಸ್ತಿ ಮಾಡುತ್ತಿದ್ದಾರೆ. ಇಲ್ಲಿ ಪ್ರಶ್ನೆ ಏನು ಅಂದರೆ ಈ ವಿಶ್ವವಿದ್ಯಾನಿಲಯ ಸ್ಥಾಪನೆ ಆಯಿತು ಎಂದು ಹೇಳಿ ಒಂದು ಘೋಷಣೆ ಮಾಡಿ ಸುಮ್ಮನೆ ಕೈಚಿತುಕೊಂಡುಬಿಟ್ಟು ನಿಧಾನಕ್ಕೆ ಒಂದೊಂದು ವರ್ಷಕ್ಕೆ ಒಂದೊಂದು ಅಮೆಂಡ್‌ಮೆಂಟ್ ತಂದರೆ ಅದರ ಅರ್ಥ ಏನು? ಏನಾದರೂ ಈ ಯೂನಿವರ್ಸಿಟಿಗೆ ಸರಿಯಾದ ರೂಪ ಕೊಡಬೇಕೆಂಬ ಆಸಕ್ತಿ ಈ ಸರ್ಕಾರಕ್ಕೆ ಇದೆಯೋ, ಇಲ್ಲವೋ ಎನ್ನುತಕ್ಕ ಮಾತನ್ನು ನಾನು ಅನೌದಾರ್ಯ ಅಂಥ ಅನಿಸಿದರೂ ಕೂಡ ಬಹಳ ಕಟುವಾಗಿ ಕೇಳಬೇಕಾಗುತ್ತದೆ. ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ, ಈ ವಿಶ್ವವಿದ್ಯಾಲಯ ಹುಟ್ಟುವುದಕ್ಕೆ ಸಾಕಷ್ಟು ವರ್ಷ ತೆಗೆದುಕೊಂಡಿದೆ. ಇವರು ವಿಶ್ವವಿದ್ಯಾಲಯ ಎಂದು ಕರೆದುಬಿಟ್ಟು ಆಲ್ಲಿಗೆ ಕೈಬಿಟ್ಟಿದ್ದಾರೆ. ವೈಸ್‌ಚಾನ್ಸಲರ್ ಒಬ್ಬರ ನೇಮಕ ಆಗಿದೆ. ಅನಂತರ ಅದಕ್ಕೆ ಆಗಬೇಕಾದಂಥ ಕೆಲವು ಅಧಿಕಾರಿಗಳ ನೇಮಕ ಕೂಡ ಇನ್ನೂ ಸರಿಯಾದ ಕ್ರಮದಲ್ಲಿ ಆಗಿಲ್ಲ. ಯಾರು ಯಾರನ್ನೋ ಸಂದರ್ಭಕ್ಕೆ ಸರಿಯಾಗಿ ಹಾಕಿದ್ದಾರೆ. ಅವರ ಹತ್ತಿರ ಕೆಲಸ ನಿರ್ವಹಣೆ ಮಾಡಲಿಕ್ಕೆ ಆಗುವುದಿಲ್ಲ. ಇವೊತ್ತು ರಿಜಿಸ್ಟ್ರಾರ್, ಮತ್ತೊಬ್ಬರು, ಅದು ಅಲ್ಲದೆ ನಾನಾ ರೀತಿಯ ಬಾಲಗ್ರಹ ಬೇರೆ. ಈಗ ಯಾವ ಯಾವ ಕಾಲೇಜುಸ್ ಕುವೆಂಪು ಯೂನಿವರ್ಸಿಟಿ ಕೆಳಗಡೆ ಬರುತ್ತದೋ ಆ ಕಾಲೇಜಿಗೆ ಸಂಬಂಧಪಟ್ಟಂತೆ, ಆ ಭೂ ಭಾಗಕ್ಕೆ ಸಂಬಂಧಪಟ್ಟಿಂತೆ, ಮತ್ತೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಯಾವುದೇ ರೀತಿಯ ಸಹಕಾರ ಸಿಕ್ಕುವುದಿಲ್ಲ. ಸ್ಟೂಡೆಂಟ್ಸ್‌ನಿಂದ ಹಿಡಿದು ಎಕ್ಸಾಮಿನೇಷನ್‌ವರೆಗೂ ಬಂತು. ಆಲ್ಲಿ ಯಾವ ಯಾವ ಕೋರ್ಸ್‌ಗಳಿಲ್ಲ. ಅದರ ಬಗ್ಗೆ ಮೈಸೂರು ಯೂನಿವರ್ಸಿಟಿಗೆ ಹೋದರೆ ಕುವೆಂಪು ಯೂನಿವರ್ಸಿಟಿ ನೋಡಿಕೊಳ್ಳಿ ಎಂದು ಹೇಳುತ್ತಾರೆ. ಬೆಂಗಳೂರು ಯೂನಿವರ್ಸಿಟಿಗೆ ಹೋದರೆ ಕುವೆಂಪು ಯೂನಿವರ್ಸಿಟಿ ನೋಡಿಕೊಳ್ಳಿ ಎಂದು ಹೇಳುತ್ತಾರೆ. ತಾತ್ಕಾಲಿಕವಾಗಿ ಒಂದು ನಾಲ್ಕೈದು ವರ್ಷಗಳ ಕಾಲ ಆದರೂ ಬೇರೆ ವಿಶ್ವವಿದ್ಯಾಲಯದಲ್ಲಿ ಈ ಭಾಗದ ಜನಗಳಿಗೆ ಹಿಂದೆ ಇದ್ದಂತೆ ಅವಕಾಶ ಇರುವ ರೀತಿಯಲ್ಲಿ ನೀವು ಮಾಡದೇ ಹೋದರೆ ಇದನ್ನು ಒಂದು ವಿಶ್ವವಿದ್ಯಾಲಯ ಎಂದು ಬರೀ ಹೆಸರು ಕರೆದಿದ್ದರಿಂದ ಏನು ಬಂತು ಸ್ವಾಮೀಜಿ? ಸರಿಯಾದ ರೀತಿಯಲ್ಲಿ ಆಲ್ಲಿ ಯಾವುದೇ ರೀತಿಯ ರೂಪ ಇನ್ನೂ ಬಂದಿಲ್ಲ. ಆದರಲ್ಲಿ ಏನಾಗಿದೆ ವೈಸ್‌ಚಾನ್ಸಲರ್ ನೇಮಕ ಮಾಡಿದ್ದೀರಿ, ಅವರ ಅಕಾಡಮಿಕ್ ಕ್ವಾಲಿಫಿಕೇಷನ್ ಬಗ್ಗೆ ಆಥವಾ ಅವರ ವೈಯಕ್ತಿಕ ಚಾರಿತ್ರ್ಯದ ಬಗ್ಗೆ ವಿವಾದ ಇಲ್ಲ. ಆದರೆ ಅವರು ಹಿ ಈಸ್ ಎ ಲಿಟರರಿ ಮ್ಯಾನ್ ನನಗೆ ತಿಳಿದುಬಂದ ಹಾಗೆ ಅವರ ಹತ್ತಿರ ಅಡ್ಮಿನಿಸ್ಟ್ರೇಷನ್ ಯಾವುದಾದರೂ ಡೆವಲಪೆಡ್ ಯೂನಿವರ್ಸಿಟಿಗೆ ಕೊಟ್ಟಿದ್ದರೆ ಅಲ್ಲಿ ಒಳ್ಳೆಯ ಆಕಾಡಮಿಕ್ ಆಟ್‌ಮಾಸ್‌ಫಿಯರ್ ಬೆಳೆಸುವುದಕ್ಕೆ ಜೀಕಾದಂಥ ಶಕ್ತಿ ಸಾಮರ್ಥ್ಯ ಇರತಕ್ಕಂಥ ವ್ಯಕ್ತಿ. ಇವೊತ್ತು ನೀವು ತೆಗೆದುಕೊಂಡು ಹೋಗಿ ಅಡ್ಮಿನಿಸ್ಟ್ರೇಷನ್ ಪ್ರಾಬ್ಲಮ್ ತಂದಾಗ ಇದ್ದು, ಇದು ಪಾರ್ಮೆಟೀವ್ ಸ್ಟೇಜ್‌ನಲ್ಲಿರತಕ್ಕ ಯೂನಿವರ್ಸಿಟಿಗೆ ಕೊಟ್ಟಿರುವುದರಿಂದ ಅವರಿಗೆ ಅಡ್ಮಿನಿಸ್ಟ್ರೇಷನ್ ಹೇಗೆ ಮಾಡಬೇಕು, ಏನು ಮಾಡಬೇಕು ಎಂದು ನೋಡಿದವರೆ ಇಲ್ಲ. ಅವರಿಗೆ ಯಾವುದೇ ಒಂದು ಸಣ್ಣಪುಟ್ಟ ವಿಷಯ ಇದ್ದರೂ ಎಲ್ಲಿ ಹೋಗಬೇಕು, ಎಲ್ಲಿ ವಂಜರಾಶಿ ತೆಗೆದುಕೊಳ್ಳಬೇಕು ಎಂದು ಗೊತ್ತಿಲ್ಲದೇ ಇರತಕ್ಕ ಪರಿಸ್ಥಿತಿ ಉಂಟಾಗಿದೆ. ಇದರ ಬಗ್ಗೆ ಹಿಂದಿನ ಮಂತ್ರಿಗಳಿದ್ದಾಗ ಒಂದು ವಿವರವಾದ ಟಿಪ್ಪಣಿಯನ್ನು ಕೊಟ್ಟಿದ್ದೆ, ಆದರ ಕಾಪಿಯನ್ನು ತಮಗೂ ಕೂಡ ಕೊಡುತ್ತೇನೆ. ಎಲ್ಲಿ ಏನೇನು ಸಮಸ್ಯೆ ಇದೆ, ಅದನ್ನು ಹೇಗೆ ನಿರ್ವಹಿಸಿಕೊಂಡು ಹೋಗಬೇಕು ಏನ್ನುವುದು ಇರಬೇಕು. ಇವರಿಗೆ ಕಾಂಪೆನ್‌ಸೇಟ್ ಮಾಡಿ ಇನ್ನೊಬ್ಬರು ಲೆಕ್ಚರರನ್ನು ರಿಜಿಸ್ಟ್ರಾರ್ ಆಗಿ ಕೊಟ್ಟರೆ ಆಗುವುದಿಲ್ಲ, ಎಜುಕೇಷನ್‌ನಲ್ಲಿ ಅಸಕ್ತಿ ಇರತಕ್ಕಂಥ You have to spare an I.A.S. officer for this University as Registrar. Then only it can take a shape. ಇಲ್ಲದೇ ಹೋದರೆ ಅಲ್ಲಿ ಇಷ್ಟು ಬೇಗನೆ ಜಾತೀಯತೆ ಪ್ರಶ್ನೆ ತಾಂಡವವಾಡುವುದಕ್ಕೆ ಶುರುವಾಗಿದೆ. ಒಬ್ಬೊಬ್ಬರೂ ಅವರವರ ಜಾತಿಯವರನ್ನು ಹುಡುಕಿ ಹಾಕುತ್ತಿದ್ದಾರೆಂದು ಹೇಳುವುದು ಈಗಾಗಲೇ ಪ್ರಾರಂಭವಾಗಿದೆ. ಆ ಯೂನಿವರ್ಸಿಟಿಯಲ್ಲಿ ಈ ತರಹ ಗಲಾಟೆ ಈಗಲೇ ಪ್ರಾರಂಭವಾದರೆ ಅದಕ್ಕೆ ರೂಪ ಹೇಗೆ ಬರುತ್ತದೆ? ಸರ್ಕಾರಕ್ಕೆ ಕೆಲವೊಂದು ತೊಂದರೆಗಳು ಇರಬಹುದು. ಎಲ್ಲವನ್ನೂ ಸರ್ಕಾರ ದಿಢೀರನೆ ಮಾಡಬೇಕೆಂದು ಒತ್ತಾಯ ಮಾಡ

ಲಿಕ್ಕೆ ನಾನು ತಯಾರಿಲ್ಲ. ಕುವೆಂಪು ಅವರ ಹೆಸರಿನ ಮೇಲೆ ವಿಶ್ವವಿದ್ಯಾಲಯವನ್ನು ನಾವು ಸ್ಥಾಪನೆ ಮಾಡಿದ್ದೇವೆ. ಅವರು ಇನ್ನೂ ಜೀವಂತ ಇದ್ದಾರೆ. ಅವರು ಇದ್ದಹಾಗೆ ನಾಳೆ ಈ ಯೂನಿವರ್ಸಿಟಿ ಒಂದು ಅಧ್ವಾನದ ಸಿಂಬಲ್ ಆಗದಂತೆ ನೋಡಿಕೊಳ್ಳಬೇಕಾಗಿರತಕ್ಕಂತಾದ್ದು ನಮ್ಮ ಕರ್ತವ್ಯ ಇದೆ. ಯಾವುದೋ ಶತಮಾನದಲ್ಲಿ ಇದ್ದವರ ಹೆಸರನ್ನು ಇಟ್ಟಿದ್ದರೆ ಅವರೇನು ಕೇಳಲು ಒರುತ್ತಾ ಇರಲಿಲ್ಲ, ನೋಡುತ್ತಾ ಇರಲಿಲ್ಲ. ಆದರೆ ಇವರು ನಮ್ಮ ಜಿಲ್ಲೆಯಲ್ಲಿಯೇ ಇದ್ದು ಅವರ ಹೆಸರನ್ನು ಇಟ್ಟಿರುವಾಗ ನಾಳೆ ಇನ್ನೊಂದು ವರ್ಷದೊಳಗೆ ಈ ಕುವೆಂಪು ಯೂನಿವರ್ಸಿಟಿಯ ಬಗ್ಗೆ ರಸ್ತೆಯ ಮೇಲೆ ಹೋತನಾಡತಕ್ಕ ಪರಿಸ್ಥಿತಿ ಬಾರದಂತೆ ನೋಡಿಕೊಳ್ಳಬೇಕೆಂದರೆ, ತಾವು ದಯವಿಟ್ಟು ವೈಯಕ್ತಿಕವಾಗಿ ಶ್ರದ್ಧೆ ವಹಿಸಬೇಕು. ಅವರು ಬಾರದೇ ಇದ್ದರೂ ನೀವು ಕರೆಸಿಕೊಂಡಿದ್ದಕ್ಕೆ ಏನು ರೂಪವನ್ನು ಕೊಡಬೇಕೋ ಆ ಒಂದು ರೂಪವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸಿ, ಆ ಒಂದು ದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡಬೇಕೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ವಿಶ್ವವಿದ್ಯಾನಿಲಯ ಹೊಸದಾಗಿ ರಚಿತವಾದಂಥ ವಿಶ್ವವಿದ್ಯಾನಿಲಯ. ಪ್ರಾರಂಭದಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆಗಳಾಗುತ್ತವೆ, ನಿಜ, ಕಳೆದಸಾರಿ ೮೭-೮೮ರಲ್ಲಿ ಸುಮಾರು ೩೫ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಬಿಡುಗಡೆ ಮಾಡಿದ್ದೇವೆ. ೮೮-೮೯ನೇ ಸಾಲಿಗೆ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಅವರ ಕೆಲಸಕ್ಕೋಸ್ಕರ ಕೊಟ್ಟಿದ್ದೇವೆ. ಈಗ ಸಧ್ಯದಲ್ಲಿ ಗಣಿತ, ಅರ್ಥಶಾಸ್ತ್ರ, ರಸಾಯನಶಾಸ್ತ್ರ, ವಾಣಿಜ್ಯ ಶಾಸ್ತ್ರ, ಇಷ್ಟು ವಿಭಾಗಗಳು ಕೆಲಸ ಮಾಡುತ್ತಿವೆ. ಆಲ್ಲಿ ಈಗ ಆರ್ಥಿಕ ಮುಗ್ಗಟ್ಟು ಹೆಚ್ಚಿಗೆ ಇದೆಯೆಂಬುದನ್ನು ಒಪ್ಪಿಕೊಳ್ಳುವಂಥಾದ್ದು. ಆಡಳಿತಾತ್ಮಕ ದೃಷ್ಟಿಯಿಂದ ಆಲ್ಲಿಗೆ ಒಬ್ಬ ದಕ್ಷ ಆಡಳಿತಾಧಿಕಾರಿ ಮತ್ತು ಒಬ್ಬ ರಿಜಿಸ್ಟ್ರಾರರವರನ್ನು ನೇಮಕ ಮಾಡಬೇಕೆಂದು ತಾವು ಹೇಳುತ್ತಿದ್ದೀರಿ. ಇದನ್ನು ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ವಿಶ್ವಕವಿಯ ಹೆಸರು ಉಳಿಯಬೇಕೆಂದು ನಿಮ್ಮ ಕಳಕಳಿ ಏನಿದೆಯೋ ನಮ್ಮ ಕಳಕಳಿಯೂ ಕೂಡ ಅದೇ ಆಗಿದೆ. ಆ ವಿಶ್ವವಿದ್ಯಾನಿಲಯ ಚೆನ್ನಾಗಿ ಆಗಬೇಕು, ವಿಶ್ವಕವಿಯ ಹೆಸರಿಗೆ ಧಕ್ಕೆ ಬಾರದಂತೆ ನಾವು ನೋಡಿಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ (೧೯೮೯ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ (೨ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ–೨

ಅಧ್ಯಕ್ಷರು.—"ಖಂಡ ೨ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

"ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ,

"೧೯೮೮ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿನೇ ತಿದ್ದುಪಡಿ) ವಿಧೇಯಕವನ್ನು" ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.

"೧೯೮೮ನೇ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿನೇ ತಿದ್ದುಪಡಿ) ವಿಧೇಯಕವನ್ನು" ಅಂಗೀಕರಿಸುವುದು.

ಪ್ರಸಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಗಮನ ಸೆಳೆಯುವ ಸೂಚನೆಗಳು

ಕುಶಾಲನಗರದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಕೊಡಗಿನವರಿಂದ ಬೇಡಿಕೆ ಇದ್ದಾಗ್ಯೂ ಹೊರ ರಾಜ್ಯದವರಿಗೆ ಪರವಾನಗಿ ನೀಡಿರುವುದರ ಬಗ್ಗೆ

ಶ್ರೀ ಡಿ.ಎ. ಚಿನ್ನಪ್ಪ (ಮಾನ್ಯ ಬಿ.ಎಸ್. ಯಡಿಯೂರಪ್ಪ ಹಾಗೂ ಕೆ.ಹೆಚ್. ಪಾಟೀಲ್‌ರವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಕುಶಾಲ ನಗರದಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಕೊಡಗಿನವರಿಂದ ಬೇಡಿಕೆ ಇದ್ದಾಗ್ಯೂ ಸಹ ಹೊರ ರಾಜ್ಯದವರಿಗೆ ಪರವಾನಗಿಯನ್ನು ನೀಡಿರುವುದರ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಯವರ ಗಮನಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ವಿದ್ಯಾ ಸಚಿವರು).—ಮಾನ್ಯ ಅಧ್ಯಕ್ಷರೆ, ೧೯೮೩-೮೪ನೇ ಸಾಲಿನಿಂದ ೧೯೮೭-೮೮ನೇ ಸಾಲಿನವರೆಗೆ ಅಂದರೆ ಕಳೆದ ೫ ಶೈಕ್ಷಣಿಕ ವರ್ಷಗಳಲ್ಲಿ ಕೊಡಗು ಜಿಲ್ಲೆಯ ಯಾವುದೇ ಶಿಕ್ಷಣ ಸಂಸ್ಥೆ ಕುಶಾಲನಗರದಲ್ಲಿ ಹೊಸ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯಂತೆ ಸಂಬಂಧಿಸಿದ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿಲ್ಲ. ಆದುದರಿಂದ ಸ್ಥಳೀಯರಿಂದ ಸರ್ಕಾರದ ಮುಂದೆ ಯಾವುದೇ ಬೇಡಿಕೆ ಬಂದಿರುವುದಿಲ್ಲ. ಮಂಗಳೂರಿನಲ್ಲಿ ಬ್ಯಾಂಚ್ ಆಡಳಿತ ಕಛೇರಿಯಿರುವ ಕೇರಳದ ಮಲಂಕಾರ್ ಆರ್ಥೋಡಾಕ್ಸ್ ಚರ್ಚ್ ಎಜ್ಯುಕೇಷನ್ ಟ್ರಸ್ಟನವರು ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ಒಂದು ಹೊಸ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸುವ ಬಗ್ಗೆ ಮಂಗಳೂರು ವಿಶ್ವವಿದ್ಯಾನಿಯಕ್ಕೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ೧೯೭೬ ರಂತೆ ಪ್ರಸ್ತಾವನೆ ಬಂದಿದ್ದು ಸದರೀ ಕಾಲೇಜನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಅಕ್ಯಾಡೆಮಿಕ್ ಕೌನ್ಸಿಲ್ ಹಾಗೂ ಸಿಂಡಿಕೇಟ್‌ಗಳು ಶಿಫಾರಸ್ಸು ಮಾಡಿವೆ. ಮಾರ್ಚ್ ೧೯೮೮ರಿಂದ ಎ.ಐ.ಸಿ.ಟಿ.ಇ. (ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಷನ್) ಕಾಯ್ದೆ ಜಾರಿಗೆ ಬಂದಿದ್ದು ಸದರೀ ಕಾಯ್ದೆಯಂತೆ ಯಾವುದೇ ತಾಂತ್ರಿಕ ಕಾಲೇಜನ್ನು ಪ್ರಾರಂಭಿಸುವ ಮುನ್ನ ಎ.ಐ.ಸಿ.ಟಿ.ಇ.ಯ ಪೂರ್ವಾನುಮತಿ ಪಡೆಯಬೇಕಾಗಿದೆ. ಆದುದರಿಂದ ಕುಶಾಲನಗರದ ಈ ಪ್ರಸ್ತಾವಿತ ಕಾಲೇಜಿಗೆ ಸರ್ಕಾರ ದಿನಾಂಕ : ೨೬-೮-೧೯೮೮ರಲ್ಲಿ ಲೆಟರ್ ಆಫ್ ಇಂಟೆಂಟ್ ನೀಡಿ ಮೇಲ್ಕಂಡ ಕಾಯ್ದೆಯಂತೆ ಎ.ಐ.ಸಿ.ಟಿ.ಇ.ಯ ಅನುಮತಿ ಪಡೆಯಲು ಹಾಗೂ ಎ.ಐ.ಸಿ.ಟಿ.ಇ. ಮತ್ತು ವಿಶ್ವವಿದ್ಯಾನಿಲಯ ವಿಧಿಸುವ ಷರತ್ತುಗಳನ್ನು ಪೂರೈಸಲು ತಿಳಿಸಲಾಗಿದೆ. ಇದೇ ಪತ್ರದಲ್ಲಿ ಮೇಲ್ಕಂಡ ಅನುಮತಿ ಪಡೆದ ನಂತರ ಸರ್ಕಾರವು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆಯಂತೆ ಸಂಯೋಜನೆ ನೀಡುವ ವಿಷಯ ಪರಿಶೀಲಿಸುವುದೆಂದು ಮತ್ತು ಸದರೀ ಪತ್ರ ಕಾಲೇಜನ್ನು ಪ್ರಾರಂಭಿಸಲು ಪರವಾನಗಿ ಎಂದು ಭಾವಿಸಬಾರದೆಂದು ಸ್ಪಷ್ಟ ಪಡಿಸಲಾಗಿದೆ. ಹಾಗೂ ಕಾಲೇಜನ್ನು ಪ್ರಾರಂಭಿಸಬಾರದೆಂದು ಸ್ಪಷ್ಟವಾಗಿ ಆಡಳಿತ ಮಂಡಳಿಗೆ ಸೂಚನೆ ಕೊಡಲಾಗಿದೆ, ಈ ಸನ್ನಿವೇಶದಲ್ಲಿ